# ಜೀವನಚಕ್ರದ ಉರುಳಿನ ಹೊಸ ನೆಲೆ ಬೆಂಗಳೂರು!

ನನ್ನ ಪಕ್ಕದ ಕೋಲೀನ್ ಬ್ರುಕ್, ಜೋಶ್‌ನನ್ನು ತನ್ನೊಂದಿಗೆ ಬಿಲ್ಡಿಂಗಿಗೆ ಬರಲು ಬಿಡಲಿಲ್ಲ ಎಂಬುದನ್ನು ಕೇಳಿ ನನಗೆ ಅತೀವ ದುಃಖವಾಯಿತು; ಆದರೆ ನಾನು ಅವಳಿಗೆ, ನನ್ನ ಹಿರಿಯ ಮಗ ಜೋಶ್ ವ್ಯಾಂಕೂವರ್‌ನಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾನೆ, ಆಗಾಗ ನನ್ನ ಬಳಿಗೆ ಬರುತ್ತಾನೆ, ನೀವು ಬಹುಶಃ ಅವನು ನನ್ನೊಂದಿಗೆ ಇರುವುದನ್ನು ನೋಡಿದ್ದೀರಿ ಎಂದೂ ಹೇಳಿದ್ದೆ. ಆದರೂ...

ನನಗೆ ತುಂಬಾ ಸಿಟ್ಟು ಬಂತು, ಇಲ್ಲಿ ಪ್ರತಿಯೊಬ್ಬರೂ ನನ್ನ ಜೋಶ್‌ನನ್ನು ಅವಮಾನ ಮಾಡುತ್ತಿದ್ದಾರೆ ಎಂದು ಅನ್ನಿಸಿತು. ನಾನು ಇದ್ದಕ್ಕಿದ್ದಂತೆ ಬಾಲ್ಕನಿಗೆ ಹೋಗಿ ಗಟ್ಟಿಯಾಗಿ ಕಿರುಚಿದೆ, 'ಎಲ್ಲರೂ ಕೇಳಿ... ಜೋಶುಆ ನನ್ನ ಮಗ... ಅವನು ಇಲ್ಲಿ ಒಬ್ಬ ಅತಿಥಿಯಲ್ಲ... ಜೋಶುಆ ನನ್ನ ಮಗ... ಬಿಲ್ಡಿಂಗ್‌ನೊಳಗೆ ಬರಲು ಅವನನ್ನು ತಡೆದರೆ, ಎಚ್ಚರ!'

'ನಿನ್ನ ಮಮ್ಮಿ ಹುಚ್ಚಿಯಾಗಿದ್ದಾಳೆ' ಜೋಶ್‌ಗೆ ಮಾರ್ಕೋ ಹೇಳಿದ.

ಜೋಶ್ ನನ್ನ ಕೈಯನ್ನು ಹಿಡಿದು ನನ್ನನ್ನು ಒಳಗೆ ಕರೆದುಕೊಂಡು ಹೋಗಿ ಹೇಳಿದ, 'ಮಮ್ಮಿ, ಇದೇನು ಮಾಡ್ತಿದ್ದೀರ? ಇದು ಅಮೆರಿಕ, ಇಂಡಿಯಾ ಅಲ್ಲ. ನೀವು ಹೀಗೆ ಮಾಡಿದರೆ, ನಾನು ಇಲ್ಲಿಗೆ ಬರುವುದನ್ನು ನಿಲ್ಲಿಸುತ್ತೇನೆ.'

ನಾನು ತುಂಬಾ ಅಸಹಾಯಕಳಾದೆ.

ನಾನು ಆಗಾಗ ಪ್ರೀತಿಯಿಂದ ಜೋಶ್‌ನ ಬೆನ್ನನ್ನು ತಟ್ಟುತ್ತಿದ್ದೆ, ಅವನಿಗೆ ಏನಾದರೂ ಖರೀದಿಸುತ್ತಿದ್ದೆ, ಆಗ ಮಾರ್ಕೋ ರೇಗುತ್ತಿದ್ದ. ನನ್ನ ಮೇಲೆ, 'ನೀನು ತಾಯಿಯಾಗಿ ತುಂಬಾ ಸಮರ್ಪಿತಳಾಗಿದ್ದೀಯ. ಆದರೆ ಪತ್ನಿಯಾಗಿ ನಿನಗೆ ನಿನ್ನ ಜವಾಬ್ದಾರಿಯ ಅರಿವು ಕಡಿಮೆಯಿದೆ. ನೀನು ನಿನ್ನ ಇಬ್ಬರು ಮಕ್ಕಳೊಂದಿಗೆ ಇರುವಾಗ ನನ್ನನ್ನೇ ಮರೆತು ಬಿಡುತ್ತೀಯ.'

ಅದೊಂದು ದಿನ ಮಾರ್ಕೋ ಹೇಳಿದ, 'ಜೋಶ್ ಬಂದಾಗ ನೀನು ತುಂಬಾ ಖುಷಿಯಾಗಿರ್ತೀಯ. ನಾನು ಬಿಜಿನೆಸ್ ಟ್ರಿಪ್ ಮುಗಿಸಿ ಮನೆಗೆ ಬಂದಾಗ, ನಿನ್ನ ಮುಖದಲ್ಲಿ ಸ್ವಲ್ಪವೂ ಸಂತಸವಿರುವುದಿಲ್ಲ.'

ಇದು ಮಿತಿಮೀರಿತ್ತು. ನೀವು ಮನೆಗೆ ಬಂದಾಗ ನಿಮ್ಮ ಹೆಂಡತಿ ಸಂತೋಷವಾಗಿರುವಂಥ ವ್ಯಕ್ತಿತ್ವ ಮತ್ತು ಸ್ವಭಾವವನ್ನು ನೀವು ರೂಪಿಸಿಕೊಳ್ಳಿ ಎಂದು ಅವನಿಗೆ ಹೇಳಲು ಬಯಸುತ್ತಿದ್ದೆ. ಆದರೆ ನಾನು ನನ್ನ ದಾಂಪತ್ಯ ಜೀವನದಲ್ಲಿ ವಿಷವನ್ನು ಹಾಕಲು ಬಯಸುತ್ತಿರಲಿಲ್ಲ. ನಾನು ನನ್ನ ಮಕ್ಕಳನ್ನು ಹೆಚ್ಚು ಪ್ರೀತಿಸುತ್ತೇನೆ, ಪತಿಯನ್ನು ಹೆಚ್ಚು ಪ್ರೀತಿಸುವುದಿಲ್ಲ ಎಂಬ ಭಾವನೆಯನ್ನು ಮಾರ್ಕೋಗೆ ಮನದಟ್ಟು ಮಾಡಲು ಬಯಸುತ್ತಿರಲಿಲ್ಲ. ನನಗೆ ಜೋಶ್‌ಗಿಂತಲೂ ಮಾರ್ಕೋ ಹೆಚ್ಚು ಮಹತ್ವದ ವ್ಯಕ್ತಿಯಾಗಿದ್ದ. ನಾನು ಅವನ ಪ್ರತಿಯೊಂದು ಸಣ್ಣಪುಟ್ಟ ವಿಶೇಷಗಳನ್ನು ಹೊಗಳಲಾರಂಭಿಸಿದೆ. ಪುರುಷರು ಪ್ರಶಂಸೆಯನ್ನು ಇಷ್ಟಪಡುತ್ತಾರೆ. ಅವನಿಗೆ ಇಷ್ಟವಾದ ವಸ್ತುಗಳನ್ನು ಖರೀದಿಸುತ್ತಿದ್ದೆ. ಸಮೀಪದ ಸ್ಟೋರ್‌ನಿಂದ ಅವನಿಗಿಷ್ಟವಾದ ಪಾನೀಯವನ್ನು ಖರೀದಿಸಿ ಫ್ರಿಜ್‌ನಲ್ಲಿಡುತ್ತಿದ್ದೆ. ಅವನು ಕಚೇರಿಯಿಂದ ಮರಳಿ ಬಂದಾಗ ಅದನ್ನು ಕೊಡುತ್ತಿದ್ದೆ. ಅವನಿಗಿಷ್ಟವಾದ ಅಡುಗೆಯನ್ನು ಮಾಡುತ್ತಿದ್ದೆ. ಅವನಿಗಾಗಿ ಬಟ್ಟೆಗಳು ಮತ್ತು ಚಪ್ಪಲಿಗಳನ್ನು ಖರೀದಿಸುತ್ತಿದ್ದೆ; ನಾನು ನಿನ್ನ ಬಗ್ಗೆಯೇ ಯೋಚಿಸುತ್ತೇನೆ, ನಿನ್ನನ್ನು ಪ್ರೀತಿಸುತ್ತೇನೆ ಎಂದು ಅವನಿಗೆ ತಿಳಿಯಪಡಿಸಲು ಬಯಸುತ್ತಿದ್ದೆ.

'ಅವಳೂ ಸಹ ನನ್ನನ್ನು ತುಂಬಾ ಪ್ರೀತಿಸುತ್ತಿದ್ದಳು... ಅವಳ ಸರಳ ಮಾತುಗಳಿಂದ ಇದು ವ್ಯಕ್ತವಾಗುತ್ತಿತ್ತು. ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ ಎಂದು ಯಾರೂ ಎದೆಯನ್ನು ಸೀಳಿ ತೋರಿಸಲಾರ' ಎಂದ ಪಾಲ್.

'ನಿಮಗೂ ಅವಳಿಗೂ ಏನು ಸಂಬಂಧವಿತ್ತು?' ನಾನು ಕೂಡಲೇ ಪಾಲ್‌ನನ್ನು ಕೇಳಿದೆ.

'ಅವಳ ಹೆಸರು ನೀನಾ ಆಗಿತ್ತು' ಎಂದ ಪಾಲ್.

'ನಿಮಗೂ ನೀನಾಗೂ ಯಾವ ಸಂಬಂಧವಿತ್ತು? ಅವಳು ನಿಮ್ಮ ಹೆಂಡತಿಯಾಗಿದ್ದಳೇ?'

'ಹೆಂಡತಿಯಾಗಿದ್ದಳು; ಕಡೆಗೆ

